ಗುಬ್ಬಿ ತಾಲ್ಲೂಕಿನಲ್ಲಿ ಸಾರಿಗೆ ಸೌಲಭ್ಯಗಳು

೧೬೨೨) ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಲ್ಲಿ ಗುಬ್ಬಿ ತಾಲ್ಲೂಕಿನ ಇಡಗೂರು ಗ್ರಾಮಕ್ಕೆ ಖಾಸಗೀ ಹಾಗೂ ಸರ್ಕಾರಿ ವಾಹನ ಸೌಕರ್ಯವಿದ್ದುದು ನಿಜವೆ?, ಹಾಗಿದ್ದಲ್ಲಿ ಆ ವ್ಯವಸ್ಥೆಯನ್ನು ನಿಲ್ಲಿಸಲು ಕಾರಣವೇನು ?

ಆ) ಹಾಗಿದ್ದಲ್ಲಿ ಅಲ್ಲಿನ ನಾಗರೀಕರಿಗೆ ಯಾವ ರೀತಿಯ ವಾಹನ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗಿದೆ,

ಇ) ಇಡಗೂರು ಗ್ರಾಮದಿಂದ ತುಮಕೂರು ಮೂಲಕ ಬೆಂಗಳೂರಿಗೆ ಬರಬೇಕಾದರೆ ಹಳ್ಳಿ ಜನರಿಗೆ ಪ್ರಯಾಣದ ವೆಚ್ಚ ಹೆಚ್ಚುವುದಿಲ್ಲವೇ,

ಈ) ಕುಣಿಗಲ್–ಗಂಗನ್ನಾಗೆರೆ–ಇಡಗೂರು ಸಿ. ಎಸ್. ಪುರ, ಕುಣಿಗಲ್, ಹೆಬ್ಬೂರು-ಮಾವಿನ ಹಳ್ಳಿ–ಸಿ. ಎಸ್. ಪುರ, ಕುಣಿಗಲ್–ನಾಗಸಂದ್ರ–ಇಡಗೂರು ಈ ಮೂರು ಮಾರ್ಗಗಳು ಪ್ರಯಾಣಕ್ಕೆ ಅನುಕೂಲವಾದ ರಸ್ತೆಗಳಾಗಿರುವುದರಿಂದ ಬಸ್ ಸೌಲಭ್ಯ ಕಲ್ಪಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ.

ಉ) ಇಡಗೂರು ಗ್ರಾಮ ಅನೇಕ ಹಳ್ಳಿಗಳಿಂದ ಸುತ್ತುವರಿದಿರುವುದರಿಂದ ಹಾಗೂ ಸಾವಿರಾರು ಜನಸಂಖ್ಯೆವುಳ್ಳ ಗ್ರಾಮವಾಗಿರುವುದರಿಂದ ಸದರೀ ರಸ್ತೆಗಳನ್ನು ರಾಷ್ಟ್ರೀಕೃತಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು–ಇಡಗೂರು ಮಧ್ಯ ಬಸ್ಸುಗಳನ್ನು ಓಡಿಸಿರುವುದಿಲ್ಲ. ಖಾಸಗೀ ಬಸ್ ಮಾಲೀಕರು ಬೆಂಗಳೂರಿನಿಂದ ಮಾಗಡಿ, ಕುಣಿಗಲ್, ಹೆಬ್ಬೂರು ಮತ್ತು ಮಾವಿನಹಳ್ಳಿ ಮಾರ್ಗವಾಗಿ ಬಸ್ಸನ್ನು ಓಡಿಸುತ್ತಿದ್ದಾರೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರು–ಇಡಗೂರು ಮಧ್ಯ ದಿನಂ ಪ್ರತಿ ೪ ಟ್ರಿಪ್ಪುಗಳಲ್ಲಿ ಈ ಕೆಳಕಂಡ ವೇಳೆಗೆ ಬಸ್ಸುಸನ್ನು ಓಡಿಸುತ್ತಿದೆ.

೧೬೦೦	೦೮೫೦	ತುಮಕೂರು	೧೧೫೦	೨೦೦೦
೧೪೦೦	೦೭೦೦	ಇಡಗೂರು	೧೫೫೦	೨೧೫೦

ಇ) ಹೌದು.

ಈ) ಈ ಹಳ್ಳಿಗಳು ರಾಷ್ಟ್ರೀಕರಣವಲ್ಲದ ವಲಯದಲ್ಲಿರುವುದರಿಂದಲೂ ಮತ್ತು ಕುಣಿಗಲ್ ಮತ್ತು ತಂಪಣಕೂರು ಮಧ್ಯದ ಮಾರ್ಗವು ಸಹಾ ರಾಷ್ಟ್ರೀಕರಣವಲ್ಲದ ವಲಯದಲ್ಲಿರುವುದರಿಂದ ಈ ಮಾರ್ಗಗಳಲ್ಲಿ ಸಂಸ್ಥೆಯ ಬಸ್ಸುಗಳನ್ನು ಓಡಿಸಲಾಗುವುದಿಲ್ಲ.

ಉ) ಸರ್ಕಾರವು ಹಂತಹಂತವಾಗಿ ಎಲ್ಲಾ ರಸ್ತೆಗಳ ರಾಷ್ಟ್ರೀಕರಣ ಮಾಡಲು ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕಾಗಿ ಒಂದು ವೈಜ್ಞಾನಿಕ ಕಾರ್ಯಕ್ರಮ ರೂಪಿಸುವ ತಳಹದಿಯಾಗಿ ಸಮಗ್ರ ಸಾರಿಗೆ ಸಮೀಕ್ಷಣೆ ನಡೆಸಲಾಗುತ್ತಿದೆ. ಇದರಿಂದ ವರದಿ ಬಂದ ನಂತರ ರಾಷ್ಟ್ರೀಕರಣ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ಕೆ.ಎಸ್.ಆರ್.ಟಿ. ಯವರು ಇಡಗೂರಿಗೆ ಬಸ್‌ಗಳನ್ನು ಓಡಿಸುತ್ತಿರಲಿಲ್ಲ ಎಂದು ಹೇಳಿದ್ದಾರೆ. ಇದು ಸರಿಯಲ್ಲ ಬಹುಶಃ ಈ ಉತ್ತರ ಶ್ರೀಮಾನ್ ವೈ.ಕೆ ರಾಮಯ್ಯನವರು ಸುಮಾರು ೪–೫ ತಿಂಗಳಿಂದೆ ಕೇಳಿದ್ದ ಪ್ರಶ್ನೆಗೆ ಉತ್ತರ ಬಂದಿತ್ತು. ಅದೇ ಉತ್ತರವನ್ನು ಈಗಲೂ ಮಾನ್ಯ ಮಂತ್ರಿಯವರು ಓದಿದ್ದಾರೆ. ನಾನು ಪ್ರಶ್ನೆ ಕೇಳಿದ ಮೇಲೆ ಇವರು ಉತ್ತರವನ್ನು ತರಿಸಲಿಲ್ಲವೆಂದು ಕಾಣುತ್ತದೆ ಬೆಂಗಳೂರಿನಿಂದ ಇಡಗೂರಿಗೆ ನೇರವಾಗಿ ಬಸ್‌ನ್ನು ಓಡಿಸಲಾಗುತ್ತಿತ್ತು. ಆದರೆ ಈಗ ಆ ಸೌಲಭ್ಯವನ್ನು ನಿಲ್ಲಿಸ

ಆಗಿದೆ. ಇಡಗೂರು ಜನರು ಬೆಂಗಳೂರಿಗೆ ಬರಬೇಕಾದರೆ, ತುಮಕೂರಿಗೆ ಬಂದು ಅಲ್ಲಿಂದ ಬೆಂಗಳೂರಿಗೆ ಬರಬೇಕಾಗಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ದಯವಿಟ್ಟು ಇದನ್ನು ಪುನಃ ವಿಚಾರ ಮಾಡಿ ಮತ್ತೆ ಇಡಗೂರಿನಿಂದ ಬೆಂಗಳೂರಿಗೆ ಬಸ್ ಓಡಿಸುವ ಹಾಗೆ ಮಾಡಿದರೆ ಒಳ್ಳೆಯದಾಗುತ್ತದೆ.

ಮತ್ತೆ ನಾನು ಕೇಳಿರುವ ೨ ' ಪ್ರಶ್ನೆಗೆ ಹೌದು ಎಂದೂ ಉತ್ತರ ಕೊಟ್ಟಿದ್ದಾರೆ ಆದ್ದರಿಂದ ದಯವಿಟ್ಟು ಈ ವಿಷಯವನ್ನು ವಿಚಾರ ಮಾಡಿ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಇಡುಗೂರಿಗೆ ಬರುವ ಹಾಗೆ ಮಾಡಿ. ಇದನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದೂ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪರಿಶೀಲನೆ ಮಾಡುತ್ತೇನೆ.

ಬೀಳಗಿ ಪುರಸಭೆಗೆ ನೀರು ಸರಬರಾಜು ವ್ಯವಸ್ಥೆ ಬಗ್ಗೆ

೧೧೪೨. ಶ್ರೀ ಬಾಬುರೆಡ್ಡಿ. ತುಂಗಳ.— ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡಲ ಪಂಚಾಯಿತಿ ಕ್ಷೇತ್ರದ ಪುನರಚನೆಯನ್ವಯ ಬೀಳಗಿ ಪುರಸಭೆ ಈಗ ಮಂಡಲ ಪಂಚಾಯಿತಿ ಆಗಿ ಪರಿವರ್ತನೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತಾಲ್ಲೂಕು ಕೇಂದ್ರ ಸ್ಥಾನವಾಗಿರುವ ಬೀಳಗಿಯಲ್ಲಿ ಅಸ್ತಿತ್ವದಲ್ಲಿರುವ ನೀರು ಪೂರೈಕೆ ವ್ಯವಸ್ಥೆ ಪದೇ ಪದೇ ಕೆಟ್ಟುಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಶಾಶ್ವತ ಪರಿಹಾರದ ಕುರಿತು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ನೀರು ಪೂರೈಕೆ ವ್ಯವಸ್ಥೆ ಕೆಟ್ಟುಹೋಗಿಲ್ಲ. ಮೂಲದಲ್ಲಿ ನೀರು ಕಡಿಮೆಯಾಗಿದೆ.

ಇ) ಶಾಶ್ವತ ಪರಿಹಾರಕ್ಕಾಗಿ ಬೀಳಗಿ ಪಟ್ಟಣದ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ, ಇಷ್ಟು ದಿವಸ ಬೀಳಗಿ ಗ್ರಾಮ ಪುರಸಭೆಯಾಗಿತ್ತು. ಇತ್ತೀಚೆಗೆ ಮಂಡಲ್ ಪಂಚಾಯಿತಿ ಕೇಂದ್ರವನ್ನಾಗಿ ಮಾಡಿದೆ. ಇದರಿಂದ ಇಲ್ಲಿ ಬಹಳ ಗೊಂದಲ ಪರಿಸ್ಥಿತಿ ಉಂಟಾಗಿದೆ. ೧೨ ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಶಾಶ್ವತವಾದ ಕುಡಿಯುವ ನೀರಿನ ಯೋಜನೆಯನ್ನು ತಯಾರು ಮಾಡಿದ್ದಾರೆ. ಇದನ್ನು ಕೆ.ಯು.ಡಬ್ಲ್ಯು. ಎಸ್. ನವರು ತೆಗೆದುಕೊಳ್ಳುವುದಿಲ್ಲವೆಂಬ ಸಂಶಯ ಮೂಡಿದೆ. ಮೂಲ ಯೋಜನೆಯನ್ನು ಕೈಬಿಟ್ಟು ನಡೆಯುತ್ತಿರುವ ಕೆಲಸ ನಡೆದಿದೆ ಅಲ್ಲಿ ಶಾಶ್ವತವಾದ ಕುಡಿಯುವ ನೀರಿನ ಪರಿಹಾರವನ್ನು ಮಾಡದೇ ಹೋದರೆ ತೊಂದರೆಯಾಗುತ್ತದೆ . ಬೀಳಗಿ ನಗರಕ್ಕೆ ಕೃಷ್ಣಾನದಿ ೭ ಕಿ.ಮೀ. ದೂರ ಇದೆ. ಅಲ್ಲಿಂದ ನೀರು ತರುವ ಪ್ರಯತ್ನ ಮಾಡಿದರೆ ಒಳ್ಳೆಯದು ಅಲ್ಲದೆ ಈಗ ಆಸ್ಪತ್ರೆಯ ಜನಗಳಲ್ಲಿ ಬಂದಿರುವ ಸಂಶಯ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಜನಗಳ ಸಂಶಯಕ್ಕೆ ಏನೂ ಕಾರಣ ಇಲ್ಲ. ಈಗ ಕೈಗೊಂಡಿರತಕ್ಕ ನೀರು ಪೂರೈಕೆ ಕಾರ್ಯಕ್ರಮ ನಿಂತು ಹೋಗುತ್ತದೆಂದು ಎಂದೂ ಹೇಳಿಲ್ಲ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಶಾಶ್ವತವಾದ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದೆಂದು ನನ ಉತ್ತರದಲ್ಲಿಯೂ ಹೇಳಿದ್ದೇನೆ ಮುಂದಿನ ಮಾರ್ಚ್, ಏಪ್ರಿಲ್‌ವರೆಗೆ, ಅಂದರೆ ಮಳೆ ಬರುವವರೆಗೆ ನೀರಿನ ತೊಂದರೆ ಇರುತ್ತದೆ ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಬರಗಾಲದ ಹಣದಲ್ಲಿ ಹೆಚ್ಚು ಕೊಳವೆ